**ಸಾಕ್ಷಿಯನ್ನು ಇಂದು ದಿನಾಂಕಃ18.07.2023 ರಂದು ಕರೆದು ಪ್ರಮಾಣೀಕರಿಸಲಾಯಿತು**

**ಮುಖ್ಯ ವಿಚಾರಣೆ- ಎದುರುದಾರರ ಪರ ಎಸ.ಎಸ.ಸಿ ವಕೀಲರಿಂದ.**

ನನ್ನ ನಿಶ್ಚಿತಾರ್ಥದ ಸಮಯದಲ್ಲಿ ನಮ್ಮ ತಂದೆ ಇದ್ದರು. ನಮ್ಮ ಮದುವೆಯ ಮಾತುಕತೆ ಕಲಬುರಗಿಯಲ್ಲಿ ಅತ್ತೆ ಮಾವನ ಮನೆಯಲ್ಲಿ ನಡೆದಿರುತ್ತದೆ. ಮದುವೆಯ ಮಾತುಕತೆಯಲ್ಲಿ ರೂ.51,000/- ಒಂದುವರೆ ತೋಲೆ ಬಂಗಾರ ಹಾಗೂ ಮದುವೆ ಮಾಡಿಕೊಡಬೇಕೆಂದು ಮಾತುಕತೆ ಆಗಿರುತ್ತದೆ. ಈ ವಿಷಯವನ್ನು ಲಿಖಿತ ರೂಪದಲ್ಲಿ ಬರೆದಿರುತ್ತದೆ. ಒಂದುವರೆ ತೋಲೆ ಬಂಗಾರ ಕೊಟ್ಟ ಬಗ್ಗೆ ರಸೀದಿ ಇರುವುದಿಲ್ಲ. ಗೃಹೋಪಯೋಗಿ ಸಾಮಾನುಗಳು ಕೊಟ್ಟ ಬಗ್ಗೆ ರಸೀದಿಗಳನ್ನು ನನ್ನ ಅತ್ತೆ ಮಾವನಿಗೆ ಕೊಟ್ಟಿರುತ್ತೇನೆ ಅವರು ತೀರಿಕೊಂಡಿರುತ್ತಾರೆ. ನನ್ನ ತಂದೆಯವರು ಬಟ್ಟೆ ಅಯಾರಿ ಖರ್ಚುಗಳನ್ನು ಮಾಡಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನಗೆ 2 ಮತ್ತು 3 ನೇ ಅರ್ಜಿದಾರರು ಮಕ್ಕಳು ಇರುತ್ತಾರೆ. 2 ನೇ ಹಾಗೂ 3 ನೇ ಅರ್ಜಿದಾರರು ನಾನು ಪ್ರಕರಣ ದಾಖಲಿಸುವ ಮುಂಚೆಯಿಂದಲೂ 1 ನೇ ಎದುರುದಾರರ ಹತ್ತಿರ ಇರುತ್ತಾರೆ ಎಂದರೆ ಸರಿ. ನಾನು ಈ ಪ್ರಕರಣ ದಾಖಲಿಸುವಾಗ 2 ಮತ್ತು 3 ನೇ ಅರ್ಜಿದಾರರು ನನ್ನೊಂದಿಗೆ ಇರಲಿಲ್ಲ. 2 ನೇ ಹಾಗೂ 3 ನೇ ಅರ್ಜಿದಾರರ ಸಂರಕ್ಷಣೆ ಹಾಗೂ ಅವರ ವಿದ್ಯಾಭ್ಯಾಸವನ್ನು ಎದುರುದಾರರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನಾನು 1 ನೇ ಎದುರುದಾರರನ್ನು ಬಿಟ್ಟು ತವರು ಮನೆಯಲ್ಲಿ ಇದ್ದು 6 ನೇ ವರ್ಷ ನೆಡಯುತ್ತಿದೆ ನಾನು ತವರು ಮನೆಗೆ ಹೋಗುವಾಗ ಗರ್ಭಿಣಿ ಆಗಿದ್ದೆ. ನಾನು 3 ನೇ ಬಾರಿ ಗರ್ಭಿಣಿ ಇದ್ದಾಗ ನನ್ನ ಅತ್ತೆ ಮಾವ ಗಂಡ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿರುವುದಿಲ್ಲ. ನಾನು ಗರ್ಭಿ,ಣಿ ಇದ್ದಾಗ ಸ್ಕ್ಯಾನಿಂಗ ಮಾಡಿಸಿ ಗಂಡು ಮಗು ಇದೆಯೋ ಅಥವಾ ಹೆಣ್ಣು ಮಗು ಇದೆಯೋ ಎಂದು ಪರಿಶೀಲನೆ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಗಂಡು ಮಗು ಇದೆ ಎಂದು ಹೇಳುತ್ತಾರೆ. ನನಗೆ ಕೇವಲ ಹೆಣ್ಣು ಮಕ್ಕಳು ಇದ್ದ ಕಾರಣ ಎದುರುದಾರರು ನನಗೆ ಕಿರುಕುಳ ನೀಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 3 ನೇ ಬಾರಿ ಗರ್ಭಿಣಿ ಇದ್ದಾಗ ಗಂಡು ಮಗು ಇದ್ದ ಕಾರಣ ಎದುರುದಾರರು ಕಿರುಕುಳ ನೀಡುವ ಪ್ರಶ್ನೆ ಬರುವುದಿಲ್ಲ ಎಂದರೆ ಮೊದಲು ಗಂಡು ಮಗು ಇರುವ ಬಗ್ಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಎದುರುದಾರರು ನನ್ನನ್ನು ಹೆಣ್ಣು ಮಗು ಇದೆ ಎಂದು ಕೊಲ್ಲಲು ಪ್ರಯತ್ನ ಮಾಡಿದ ದಿನಾಂಕ ನೆನಪಿರುವುದಿಲ್ಲ. ನಾನು ಕೊಲ್ಲಲು ಪ್ರಯತ್ನ ಮಾಡಿದ ಬಗ್ಗೆ ಪೋಲಿಸರ ಮುಂದೆ ಫಿರ್ಯಾದಿ ನೀಡಿರುವುದಿಲ್ಲ. ನನ್ನ ಗಂಡನಿಗೆ ಒಬ್ಬ ಅಣ್ಣ ಇರುತ್ತಾನೆ. ನನ್ನ ಅತ್ತೆ ಮಾವ ಜೀವಂತವಾಗಿ ಇರುತ್ತಾರೆ. ನನ್ನ ಅತ್ತೆ ಮಾವನಿಗೆ ವಯಸ್ಸು ಆಗಿರುತ್ತದೆ. ನಾನು ಎದುರುದಾರರೊಂದಿಗೆ ಇದ್ದಾಗ ಅವರು ಕೂಡಿ

ಇದ್ದರು ಈಗ ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ನೌಕರಿ ಇರುವುದಿಲ್ಲ. ನನ್ನ ಗಂಡ ಒಕ್ಕಲುತನ ಮಾಡುತ್ತಾರೆ. ನನ್ನ ಗಂಡನಿಗೆ 4 ಎಕರೆ, ನನ್ನ ಮಾವನಿಗೆ 4 ಎಕರೆ ಹಾಗೂ ನನ್ನ ಭಾವನಿಗೆ 4 ಎಕರೆ ಹೊಲ ಇರುತ್ತದೆ. 1 ನೇ ಎದುರುದಾರರ ಹತ್ತಿರ ಇರುವ ಸರ್ವೆ ನಂಬರ ನನಗೆ ಗೊತ್ತಿಲ್ಲ. 1 ನೇ ಎದುರುದಾರರ ಹತ್ತಿರ ಇರುವ ಜಮೀನು ಒಣ ಬೇಸಾಯ ಜಮೀನು ಎಂದರೆ ಸಾಕ್ಷಿ ನೀರಾವರಿ ಜಮೀನು ಎಂದು ಹೇಳುತ್ತಾರೆ. ನನ್ನ ಗಂಡನಿಗೆ 4 ಎಕರೆ ಜಮೀನು ಇರುವ ಬಗ್ಗೆ ಹಾಗೂ ನೀರಾವರಿ ಜಮೀನು ಇರುವ ಬಗ್ಗೆ ನ್ಯಾಯಾಲಯಕ್ಕೆ ಪಹಣಿಯನ್ನು ಸಲ್ಲಿಸಿರುತ್ತೇನೆ. 1 ನೇ ಎದುರುದಾರನಿಗೆ ನೀರಾವರಿ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 2 ಬೋರವೆಲ ಇದೆ ಎಂದು ಹೇಳುತ್ತಾರೆ. ಪಹಣಿಯ್ಲಿ ಬೋರ ಇರುವ ಬಗ್ಗೆ ನಮೂದು ಮಾಡಿರುವುದಿಲ್ಲ. 1 ನೇ ಎದುರುದಾರರು, ಉಳ್ಳಾಗಡ್ಡಿ, ಕಬ್ಬು, ಹೆಸರು, ತೋಗರಿ ಬೆಳೆಯುತ್ತಾರೆ. 1 ನೇ ಎದುರುದಾರರಿಗೆ ಹೊಲದ ಉತ್ಪನ್ನ ವರ್ಷಕ್ಕೆ 1 ಲಕ್ಷ ರೂಪಾಯಿ ಇರುತ್ತದೆ ಎಂದರೆ ಸರಿ. ಸದರಿ ಉತ್ಪನ್ನದಿಂದಲೇ ಎದುರುದಾರರು ಎಲ್ಲರನ್ನು ನೋಡಿಕೊಂಡು ಹೋಗುತ್ತಾರೆ ಎಂದರೆ ಸರಿ.ಸದರಿ ಉತ್ಪನ್ನದಿಂದಲೇ ಮಕಕಳ ಶಾಲೆಯ ಖರ್ಚು ಹಾಗೂ ತಂದೆ ತಾಯಿಯ ಆರೋಗ್ಯದ ಖರ್ಚನ್ನು ನೋಡಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ನನ್ನ ತಂದೆಯವರು ಒಕ್ಕಲುತನ ಮಾಡುತ್ತಾರೆ ಎಂದರೆ ಸರಿ. ನಾನು ಮದುವೆ ಮುಂಚೆ ತಂದೆಯೊಂದಿಗೆ  ಒಕ್ಕಲುತನ ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನ ಕುಟುಂಬವು ಒಕ್ಕಲುತನದ ಕುಟುಂಬ ಎಂದರೆ ಸರಿ. ನನ್ನ ಮದುವೆಯಾದ ನಂತರ ನನ್ನ ಅತ್ತೆ ಮಾವನಿಗೆ ನಾನೇ ಕಿರುಕುಳ ನೀಡುತ್ತಿದ್ದೇ ಎಂದರ ಸರಿಯಲ್ಲ. ನಾನು ನನ್ನ ಗಂಡನಿಗೆ ನೌಕರಿ ಇಲ್ಲ ಎಂದು ಕಿರುಕುಳ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಾನೇ ಎದುರುದಾರರಿಗೆ ಆತ್ಮಹತ್ಯೆ ಮಾಡಿಕೊಳುಳತ್ತೇನೆ ಎಂದು ಬೆದರಿಕೆ ಹಾಕಿದ್ದೇನೆ ಎಂದರೆ ಸರಿಯಲ್ಲ. 2012 ರಲ್ಲಿ ಬೆಳಗಿನ ಜಾವ 6 ಗಂಟೆಗೆ ಬಾವಿಯಲ್ಲಿ ಕಲ್ಲಿಗೆ ಸೀರೆ ಕಟ್ಟಿ ತವರು ಮನೆಗೆ ಹೋಗಿ ಎದುರುದಾರರನ್ನು ಹೆದರಿಸಿರುತ್ತೇನೆ ಎಂದರ ಸರಿಯಲ್ಲ. ನಾನು ಎರಡೂ ಮಕ್ಕಳನ್ನು ಬಿಟ್ಟು ಬಂಗಾರವನ್ನು ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವ ಹಾಗೂ ಗಂಡ ನನ್ನನ್ನು 2-3 ದಿನಗಳ ಕಾಲ ಹುಡುಕಾಡಿದಾಗ ತವರು ಮನೆಗೆ ವಿಷಯ ತಿಳಿಸಲು ಬಂದಾಗ ನಾನು ಅಲ್ಲೇ ಇದ್ದೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಈಗಲೂ ಸಹ ನನ್ನೊಂದಿಗೆ ಸಂಸಾರ ಮಾಡಲು ಸಿದ್ದನಿದ್ದಾನೆನಾನು ಹೋಗಲು ಸಿದ್ದಳಿಲ್ಲ ಎಂದರೆ ಸಾಕ್ಷಿ ಯಾವ ಆಧಾರದ ಮೇಲೆ ನಾನು 1 ನೇ ಎದುರುದಾರನೊಂದಿಗೆ ಹೋಗಲಿ ಎಂದು ಹೇಳುತ್ತಾರೆ. ಇದೇ ವಿಷಯಕ್ಕಾಗಿ ಪಂಚಾಯತಿ ಮಾಡಿ ಶಿವಮೂರ್ತಿ ಬಿರಾದಾರ, ಲಕ್ಷ್ಮಣ ಮಾಲಿಪಾಟೀಲ, ಪ್ರಕಾಶ ಬಿರಾದಾರ, ಚಂದ್ರಕಾಂತ ಕಮಲಾಪೂರೆರವರು ನನ್ನ ತಂದೆ ತಾಯಿಗೆ ಹಾಗೂ ನನಗೆ 1 ನೇ ಎದುರುದಾರನೊಂದಿಗೆ ಸಂಸಾರ ಮಾಡಲು ಕಳುಹಿಸಿಕೊಡಿ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ಪಂಚಾಯತಿ ಆಗಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಗಂಡನನ್ನುನಾನೇ ಸ್ವತ ಬಿಟ್ಟು ಹೋದ ಕಾರಣ ನಾನು ಜೀವನಾಂಶಕ್ಕೆ ಅರ್ಹನಿರುವುದಿಲ್ಲ ಎಂದರೆ ಸಾಕ್ಷಿ 1 ನೇ

ಎದುರುದಾರ ಕೊಲೆ ಮಾಡಲು ಬಂದ ಕಾರಣ ನಾನು ಬಿಟ್ಟು ಬಂದಿರುತ್ತೇನೆ ಎಂದು ಹೇಳುತ್ತಾರೆ. 2ನೇ ಮತ್ತು 3ನೇ ಅರ್ಜಿದಾರರು ಎದುರುದಾರನೊಂದಿಗೆ ಇದ್ದ ಕಾರಣ ಅವರಿಗೆ ಜೀವನಾಂಶ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ನಾನು ಅವರಿಗೆ ಜೀವನಾಂಶ ಕೇಳಿಲ್ಲ ಎಂದು ಹೇಳುತ್ತಾರೆ. ನಾನು ಜೀವನಾಂಶ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

**ಪಾಟಿ ಸವಾಲುಃ-** ಎದುರುದಾರರು ಏಕತರ್ಫಿಯಾಗಿರುತ್ತಾರೆ.

ಓ.ಹೇ.ಕೆ.ಸರಿ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ.ಸಿ. ಆಳಂದ.